ಕರ್ನಾಟಕ ಸರ್ಕಾರ

ಸಂ:ಬಿ2/ಜಿಎಫ್ಎಲ್/0. 9416/ಕೆಪಿಟಿಸಿಎಲ್/ಸಿಆರ್-/2022-23 1845

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ
ದಿನಾಂಕ: 01 -12-2024
01-2025

ಗೆ,

Executive Engineer
Major Works Division
KPTCL 1st Floor
Transmission Zone Complex
Navanagar, Bagalkote.

# DEMAND NOTICE

ಮಾನ್ಯರೆ,

ವಿಷಯ: Diversion of 0.9416 ha. of Forest land in Sy.No. 09 in Sabbalahunasi village, Bagalkot District for Construction of new 110K V LILO line of 10.235Kms on DC towers from 110KV Guledgudda - Ilkal line to Proposed 110/11kV Nagaral S P S/S corridor of 0.428Kms in Sy No.9 in Sabalahunasi Village, in Guledgudda Taluk, Bagalkot District in favor of Executive Engineer (Ele), Major works division Bagalkot, KPTCL Sector No-45 Navanagar, Bagalkot District.

ಉಲ್ಲೇಖ:
1) ಕೇಂದ್ರ ಸರ್ಕಾರದ ಪ್ರಾಥಮಿಕ ಅನುಮೋದನೆ ಸಂಖ್ಯೆ: F.No.4-KRB 1443/2023-BAN/099 ದಿನಾಂಕ: 29-03-2023.
2) ಈ ಕಚೇರಿ ಪತ್ರ ಡಿಮ್ಯಾಂಡ್ ನೋಟಿಸ ಸಂಖ್ಯೆ: ಬಿ2/ಜಿಎಫ್ಎಲ್/0.9416/ ಕೆಪಿಟಿಸಿಎಲ್/22-23/70 ದಿನಾಂಕ: 17-04-2023.
3) ಕಾರ್ಯ ನಿರ್ವಾಹಕ ಇಂಜನಿಯರರು (ವಿ), ಬೃಹತ್ ಕಾಮಗಾರಿ ವಿಭಾಗ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬಾಗಲಕೋಟೆರವರ ಪತ್ರ ಸಂಖ್ಯೆ: 614/ಬಾಕೋ/ ಕಾನಿಇಂ(ವಿ) /ಬೃಕಾವಿ/ಸಕಾನಿಇಂ(ಕ) ದಿನಾಂಕ: 06-04-2023 ಮತ್ತು 28-04-2023.
4) ಈ ಕಚೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/0.9416/ಕೆಪಿಟಿಸಿಎಲ್/22-23/177 ದಿನಾಂಕ: 03-05-2023.
5) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್ ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: A5(3)/GFL/CR-28/2009-10 ದಿನಾಂಕ: 22-08-2023.
6) ವಲಯ ಅರಣ್ಯ ಅಧಿಕಾರಿ, ಬಾದಾಮಿ ರವರ ಪತ್ರ ಸಂಖ್ಯೆ: ವಅಅ//ಬಾದಾಮಿ/ನಿರಪಯುಕ್ತ/2024-25 ದಿನಾಂಕ: 18-12-2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಲೈನ್ ಅಳವಡಿಸಲು ಬಾಗಲಕೋಟೆ ವಿಭಾಗದ ಬದಾಮಿ ವಲಯದ ಸಬ್ಬಲಹುಣಸಿ ಗ್ರಾಮದ ಅ.ಸ.ನಂ. 9 ರಲ್ಲಿ 0.9416 ಹೆಕ್ಟೇರ್ ಅರಣ್ಯ ಭೂಮಿ ಅರಣ್ಯೇತರ ಉದ್ದೇಶಕ್ಕ ಬಳಸಿಕೊಳ್ಳಲು ಅನುಮತಿ ಕೋರಿ ಸಲ್ಲಿಸಿದ ಪ್ರಸ್ತಾವನೆ ಸಂಖ್ಯೆ: FP/KA/TRANS/144502/2021 ಗೆ ಉಲ್ಲೇಖ (1) ರಡಿ ಕೇಂದ್ರ ಸರ್ಕಾರವು ಪ್ರಾಥಮಿಕ ಅನುಮೋದನೆ ನೀಡಿರುತ್ತದೆ. ಸದರಿ ಪ್ರಾಥಮಿಕ ಅನುಮೋದನೆಯಲ್ಲಿ ವಿಧಿಸಿರುವ ಶರತ್ತುಗಳಿಗೆ ಒಳಪಟ್ಟು ಉಲ್ಲೇಖ (4)ರ ಈ ಕಚೇರಿ ಪತ್ರದಡಿ ನಿಯಮಾನುಸಾರ ಕರಾರುನಾಮೆ ಮಾಡಿಕೊಂಡು ಒಂದು ವರ್ಷದ ಅವಧಿಗೆ ಒಳಪಟ್ಟು ಕೆಲಸ ನಿರ್ವಹಿಸಲು ನಿಗಮಕ್ಕೆ ಅನುಮತಿಯನ್ನು ನೀಡಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (1)ರ ಕೇಂದ್ರ ಸರ್ಕಾರದ ಪ್ರಾಥಮಿಕ ಅನುಮೋದನೆಯ ಭಾಗ-ಬಿ ಯಲ್ಲಿ ವಿಧಿಸಿರುವ ಶರತ್ತು ಸಂಖ್ಯೆ: 7 ರಲ್ಲಿ ಅರಣ್ಯ ಇಲಾಖೆಯೊಂದಿಗೆ ಸಮಾಲೋಚಿಸಿ ಕುಬ್ಜ ಜಾತಿಯ (Dwarf Species) ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಸ್ಕೀಮ್ ತಯಾರಿಸಿ ಸಲ್ಲಿಸುವ ಶರತ್ತು ವಿಧಿಸಿರುತ್ತದೆ.

.....2

ಉಲ್ಲೇಖ (1) ರ ಪ್ರಕಾರ ಸದರಿ ಷರತ್ತಿನಂತೆ ಅರಣ್ಯೇತರ ಉದ್ದೇಶಕ್ಕೆ (ವಿದ್ಯುತ್ ಲೈನ್) ಬಳಸಲು ಪ್ರಾಥಮಿಕ ಅನುಮೋದನೆ ನೀಡಿರುವ ಸಬ್ಬಲಹುಣಸಿ ಅ.ಸ. ನಂ. 9 ರಲ್ಲಿಯ 0.9416 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಪರಿಶೀಲಿಸಲಾಗಿ, ಸದರಿ ಅರಣ್ಯ ಪ್ರದೇಶವು ಕಲ್ಲು ಬಂಡೆಗಳಿಂದ ಕೂಡಿದ್ದು, ಸದರಿ ಪ್ರದೇಶದಲ್ಲಿ ಕುಬ್ಜ ಜಾತಿಯ (Dwarf Species) ಸಸಿಗಳನ್ನು ನೆಟ್ಟು ನೆಡುತೋಪು ಬೆಳೆಸಲು ಯೋಗ್ಯವಾಗಿರುವುದಿಲ್ಲಾ ಎಂದು ವಲಯ ಅರಣ್ಯ ಅಧಿಕಾರಿ, ಬಾದಾಮಿ ಇವರು ಉಲ್ಲೇಖ (6) ರ ಪ್ರಕಾರ ವರದಿ ಮಾಡಿರುತ್ತಾರೆ.

ಇಂತಹ ಸಂದರ್ಭದಲ್ಲಿ ವನ ಸಂರಕ್ಷಣಾ ಇವಂ ಸಂವರ್ಧನ ಅಧಿನಿಯಮ-1980 ರ ಅಧ್ಯಾಯ : 10.5 ಪ್ರಕಾರ ಪ್ರಸ್ತಾಪಿತ ಅರಣ್ಯ ಪ್ರದೇಶವು ನೆಡುತೋಪು ಬೆಳೆಸಲು ಯೋಗ್ಯವಿಲ್ಲದಿದ್ದಲ್ಲಿ, ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ಒಂದು ಹೆಕ್ಟೆರ್ ಪ್ರದೇಶಕ್ಕಿಂತ ಕಡಿಮೆ ಇಲ್ಲದಂತೆ ಕುಬ್ಜ ಜಾತಿಯ (Dwarf Species) ನೆಡುತೋಪು ಬೆಳೆಸಲು (ಆದ್ಯತ ಮೇರೆಗೆ ಔಷಧಿ ಸಸಿಗಳನ್ನು ನೆಟ್ಟು ನೆಡುತೋಪು ಬೆಳೆಸಲು) ಮಾರ್ಗಸೂಚಿ ಇರುತ್ತದೆ.

ಆದ್ದರಿಂದ ವಲಯ ಅರಣ್ಯ ಅಧಿಕಾರಿ, ಬಾದಾಮಿ ಇವರು ಕುಬ್ಜ ಜಾತಿಯ (Dwarf Species) ನೆಡುತೋಪು ಬೆಳೆಸಿ 10 ವರ್ಷ ನಿರ್ವಹಣೆ ಮಾಡಲು ಬಾದಾಮಿ ವಲಯದ ವ್ಯಾಪ್ತಿಯಲ್ಲಿ ಬರುವ ಹುಲ್ಲಿಕೇರಿ ಎಸ್.ಪಿ ಅ.ಸ. ನಂ. 34 ರ ಒಂದು ಹೆಕ್ಟೆರ್ ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ಕುಬ್ಜ ಜಾತಿಯ (Dwarf Species) ಸಸಿಗಳ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಮಾಡಲು ಸ್ಥಳ ಆಯ್ಕೆ ಮಾಡಿ ಸೈಟ್ ಸ್ಪೇಸಿಫಿಕ್ ಪ್ಲ್ಯಾನ್ (ಎಸ್.ಎಸ್.ಪಿ) ದೊಂದಿಗೆ ಸಲ್ಲಿಸಿರುತ್ತಾರೆ. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್ ಸಿಎ), ಬೆಂಗಳೂರುರವರು ಉಲ್ಲೇಖ (5) ರಡಿ ನಿಗಧಿಪಡಿಸಿರುವ ಈ ಕೆಳಗಿನ ದರಗಳಂತೆ ಮೊತ್ತವನ್ನು ಅರಣ್ಯ ಇಲಾಖೆಗೆ ನಿಗಮವು ಭರಣಾ ಮಾಡಬೇಕಾಗುತ್ತದೆ.

| Stage-I approval Condition number & particulars in brief | Quantity/Extent (Ha) | Rate (Rs/Unit) | Amount required to be paid (Rs) | Amount paid already (Rs) | Balance amount required to be paid now (Rs.) |
|---|---|---|---|---|---|
| (1) | (2) | (3) | (4) | (5) | (6) |
| Condition Number (7) Part-B, The user agency in consultation with the State Forest Department prepare a detailed scheme for Creation and maintenance of plantation of dwarf species the said scheme to the State Forest Department | 1.00 | 7,25,00/- | 7,25,000/- | 0.00 | 7,25,000/- |
| | | | | **Total:** | **7,25,000/-** |

ಆದಕಾರಣ ಈ ಮೇಲಿನಂತೆ ಕುಬ್ಜ ಜಾತಿಯ (Dwarf Species) ನೆಡುತೋಪುನ್ನು ಹುಲ್ಲಿಕೇರಿ ಎಸ್.ಪಿ. ಅ.ಸ. ನಂ. 34 ರಲ್ಲಿ ಬೆಳೆಸಿ ನಿರ್ವಹಣೆ ಮಾಡಲು ರೂ. 7.250 ಲಕ್ಷ ಮೊತ್ತವನ್ನು www.parivesh.nic.in ತಂತ್ರಾಂಶದ ಮುಖಾಂತರ ಪಾವತಿಸಿ ಅನುಪಾಲನಾ ವರದಿಯನ್ನು ಈ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ